ಅವನು ತಲೆ ಕೆಳಗೆ ಹಾಕಿ ಕ್ಷಣ ಕೂತ. ನಂತರ ಹೇಳಿದ. "ನನ್ನ ಮಗನ ಹೆಸರು, ನಂಬರು, ಕಾಗದ ಪತ್ರ ಎಲ್ಲ ನನ್ನ ಹತ್ತಿರ ಇವೆ ಬಾಬು. ಅಲ್ಲೊಂದು ಅಂಗಡೀಲಿ ಇಟ್ಟಿದಿನಿ, ತಂದು ತೋರಿಸ್ತಿನಿ."

"ನನಗೆ ತೋರಿಸಬೇಕಾದ ಅಗತ್ಯವಿಲ್ಲ. ಈ ಅರ್ಜಿಗಿರ್ಜಿ ಬರೆಯೋ ಕೆಲಸ ನನಗಾಗಲ್ಲ. ನೀನಿನ್ನು ಹೋಗಬಹುದು."

"ಬಾಬೂ!?"

"ಏನಪ್ಪ! ನೀನು ಯಾರು, ಏನು ಎತ್ತ ಒಂದೂ ಗೊತ್ತಿಲ್ಲ. ನಿನಗೆ ನಮ್ಮ ಮನೆ ವಿಳಾಸ ಕೊಡಲಾ? ಯಾರಾದ್ರೂ ಈ ತರ ಮಾಡ್ತಾರಾ? ಆಮೇಲೆ ನಂಗೇನಾದ್ರೂ ತೊಂದರೆ ಆದ್ರೆ?"

ಅವನು ಬಹಳ ವ್ಯಾಕುಲನಾಗಿ ಹೇಳಿದ, "ತೊಂದರೆ ಹೇಗಾಗುತ್ತೆ ಬಾಬು? ಇದೊಂದು ಸಣ್ಣ ವಿಷಯ. ಸರ್ಕಾರ ಕೊಡ್ತಾ ಇರೋದ್ರಿಂದ್ಲೇ ನಾನು ಇಲ್ಲಿಗೆ ಬಂದಿರೋದು. ಹಾಗಂತ ಎಲ್ಲರೂ ಹೇಳ್ತಾ ಇದ್ದಾರೆ. ಪೇಪರಲ್ಲೂ ಬಂದಿದೆ. ಆದರೆ, ನಾನು ಅವರಿಗೆ ತಿಳಿಸಬೇಕಾಗಿದೆಯಲ್ಲವೇ? ನಾನು ಜಗತ್ ಝಾನ ಬಾಬಾ ಭುವನ್ ಝಾ, ಈ ವಿಳಾಸ ನಂದು, ನಂಗೆ ದುಡ್ಡು ಇಲ್ಲಿಗೆ ಕಳಿಸಿಕೊಡಿ ಅಂತ. ಈ ವಿಳಾಸ ಇಲ್ಲದಿರೋದ್ರಿಂದಲೆ... ಆರು ತಿಂಗಳಿಂದ ತಿರುಗ್ತಾ ಇದ್ದೀನಿ ಬಾಬು. ದುಡ್ಡು ತಗೊಳೋಕೆ ಆಗ್ತಿಲ್ಲ. ನಿಮ್ಮ ಪಾದಕ್ಕೆ ಬಿಳ್ತೀನಿ ದೇವ್ರು!..." ದಿಢೀರನೆ ಅಸಿತ್‌ನ ಕಾಲು ಹಿಡಿದುಕೊಂಡ.

ಥೂ, ಇದೆಂಥ ಅಸಹ್ಯ! ಅಸಿತ್ ಧಡಕ್ಕನೆ ಕಾಲು ಕಿತ್ಕೊಂಡ. "ನಂಗೆ ಅದೆಲ್ಲ ಆಗೋದಿಲ್ಲ. ನೀನು ಬೇರೆ ಕಡೆ ಎಲ್ಲಾದ್ರೂ ಹೋಗು."

"ಬೇರೇ... ಕಡೆ?" ಅವನು ಹತಾಶನಾದ. "ಆರು ತಿಂಗಳಿಂದ ಮನೆ ಮನೆ ತಿರುಗ್ತಾ ಇದ್ದೀನಿ ಬಾಬು, ಯಾರೂ ವಿಳಾಸ ಕೊಡೋಕೆ ತಯಾರಿಲ್ಲ."

"ಹಾಗಾದ್ರೆ, ನಾನ್ಯಾಕೆ ಕೊಡಬೇಕು?"

"ದೀದಿಮೋನಿ ನನಗೆ ಭರವಸೆ ಕೊಟ್ಟಿದ್ದಾರೆ ಬಾಬೂ."

ಅಸಿತ್‌ಗೆ ಬಹಳ ಕೋಪ ಬಂತು, "ಗೊತ್ತು. ಅದಕ್ಕೇ ನೀನು ಮಧ್ಯಾನ್ಹ ಬಂದಿದೀಯಾ. ಅತ್ತು ಕರೆದು ಹೆಂಗಸರ ಮನ ಕರಗಿಸಿ... ನಾನು ಹೇಳ್ತಾ ಇದ್ದೀನಿ, ಅದೆಲ್ಲ ಆಗೋದಿಲ್ಲ. ಇಲ್ಲಿಂದ ತೊಲಗು."

"ಬಾಬೂ, ಒಂಚೂರು ಯೋಚನೆ ಮಾಡಿ. ನಿಮಗೇನು ತೊಂದರೆಯಾಗ್ತದೆ? ಪೋಸ್ಟ್‌ಮ್ಯಾನ್ ಒಂದು ಕಾಗದ ತಂದು ನಿಮ್ಮ ಡಬ್ಬದೊಳಗೆ ಹಾಕ್ತಾನೆ, ಅದನ್ನ ನೀವು ನನಗೆ ಕೊಡಿ. ಅಷ್ಟೇ."



"ಇದೆಲ್ಲ ನೋಡಿ ಸಾಕಾಗಿದೆ. ಅದೆಲ್ಲ ಅತ್ತಗಿರಲಿ. ನೀನು ಈ ತರ ಇಲ್ಲೇ ಸುತ್ತಾಡ್ತಾ ಇದ್ರೆ ಪೊಲೀಸ್‌ಗೆ ಕಂಪ್ಲೇಂಟ್ ಕೊಡ್ತೀನಿ."

"ಪೊಲೀಸ್‌ಗೆ ಹೇಳ್ತೀರಾ!" ಅವನು ಭಯ ಆತಂಕದಿಂದ ಧಡಕ್ಕಂತ ಎದ್ದು ನಿಂತ್ಕೊಂಡ. ಅಸಿತ್ ಮನದಲ್ಲೇ ನಗ್ತಾ ಇದ್ದ. ಹಾಗೇ ಬಾ ದಾರಿಗೆ. ಪೊಲೀಸ್ ಸ್ಟೇಷನ್ ಹೆಸರು ಹೇಳಿದ ಕೂಡಲೇ ತಡಬಡಾಯಿಸುತ್ತಿದ್ದಾನೆ. ಕಳ್ಳ! ಆದರೆ, ಉದಾಸೀನನಾಗಿ ನುಡಿದ, "ನೀನು ಈ ತರ ಮನೆ ಸುತ್ತಮುತ್ತಾ ತಿರುಗ್ತಾ ಇದ್ರೆ..."

"ನಾನು ಕಳ್ಳತನ ಮಾಡೋಕೆ ಬಂದಿಲ್ಲ ಬಾಬು" ಬೆಂಕಿಯುಗುಳುತ್ತಿತ್ತು ಅವನ ಧ್ವನಿ. "ಬರೀ ಒಂದು ಸಾಮಾನ್ಯ ಭಿಕ್ಷೆ ಬೇಡೋಕೆ ಬಂದಿದಿನಿ ನಾನು. ದುಡ್ಡು ಕಾಸು ಏನೂ ಬೇಡ. ಬರೀ ಒಂಚೂರು ವಿಳಾಸ ಕೊಟ್ಟರೆ ಸಾಕು. ಅಷ್ಟಕ್ಕೇ ನನ್ನ ಪೊಲೀಸ್‌ಗೆ ಹಿಡಿದುಕೊಡ್ತೀರಾ? ನೀವಾದ್ರೋ ಓದಿ ಬರೆದು ಮಾಡಿರೋ ದೊಡ್ಡ ಮನುಷ್ಯರು, ಆದರೂ ಇಷ್ಟು ಭಯಾನಾ? ಸರಿ, ನಾನು ಈ ಜಾಗ ಬಿಟ್ಟು ಹೋಗ್ತೀನಿ. ಈ ತರ ಎಷ್ಟೋ ಜಾಗ ಬಿಟ್ಟು ಬಂದಿದಿನಿ." ದುಃಖ ಮತ್ತು ತಿರಸ್ಕಾರದಿಂದ ಹೇಳಿದ, "ದೊಡ್ಡೋರ ಜಾತಿಯೇ ಹೀಗೆ. ಮನಸ್ಸಿಲ್ಲ, ಹೃದಯವಿಲ್ಲ."